ಕರ್ನಾಟಕ ಸರ್ಕಾರ
ಸಹಕಾರ ಚುನಾವಣಾ ಪ್ರಾಧಿಕಾರ

ಸಂಖ್ಯೆ: ಸಚುಪ್ರಾ/ಚುನಾವಣೆ/ಏಪ್ರಿಲ್-ಡಿಸೆಂಬರ್/ 02 /2015

3ನೇ ಮಹಡಿ, ಟಿ.ಟಿ.ಎಂ.ಸಿ.ಕಟ್ಟಡ "ಎ"ಬ್ಲಾಕ್,
ಶಾಂತಿನಗರ, ಬೆಂಗಳೂರು-560027
ದಿನಾಂಕ: 23.02.2015.

## -: ಅಧಿಸೂಚನೆ

ವಿಷಯ:- ದಿನಾಂಕ : 01.04.2015 ರಿಂದ 31.12.2015ರವರೆಗೆ ಅವಧಿ ಮುಗಿಯಲಿರುವ ಪ್ರಾಥಮಿಕ ಹಂತದ ಸಹಕಾರ ಸಂಘಗಳ ಮತ್ತು ಸಹಕಾರಿಗಳ ಆಡಳಿತ ಮಂಡಲಿಗೆ ಚುನಾವಣೆ ಹಾಗೂ ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಗಳನ್ನು ನಡೆಸುವ ಕುರಿತು.

ಉಲ್ಲೇಖ:- ಸಹಕಾರ ಚುನಾವಣಾ ಆಯೋಗದ ಅಧಿಸೂಚನೆಸಂಖ್ಯೆ: ಸಚುಆ/ಚುನಾವಣೆ/84/ 2014 ದಿನಾಂಕ: 06.11.2014.

★★★★★

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959ರ (ಸಂಕ್ಷಿಪ್ತವಾಗಿ 'ಅಧಿನಿಯಮ') ಪ್ರಕರಣ 39ಎ (1) ಮತ್ತು ಪ್ರಕರಣ 39-ಎಎ(2) ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಪ್ರಕರಣ 26-ಎ ಗಳ ಅವಕಾಶದಂತೆ ರಾಜ್ಯದಲ್ಲಿನ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ನಡೆಯುವ ಎಲ್ಲಾ ಚುನಾವಣೆಗಳನ್ನು ನಡೆಸುವ ಮತ್ತು ತತ್ಸಂಬಂಧಿತ ಮತದಾರರ ಪಟ್ಟಿಗಳನ್ನು ತಯಾರಿಸುವ ಕಾರ್ಯದ ಅಧೀಕ್ಷಣೆಯು ಸಹಕಾರ ಚುನಾವಣಾ ಪ್ರಾಧಿಕಾರದಲ್ಲಿ ನಿಹಿತವಾಗಿರುತ್ತದೆ. ಅಧಿನಿಯಮ ಪ್ರಕರಣ 39-ಎ(2)(ಎ)ರೀತ್ಯಾ ಮೊದಲ ಹಂತದಲ್ಲಿ ಪ್ರಾಥಮಿಕ ಸಹಕಾರ ಸಂಘಗಳಿಗೆ ಸಂಬಂಧಪಟ್ಟಂತೆ ಚುನಾವಣೆಗಳು ನಡೆಯತಕ್ಕದ್ದಾಗಿದೆ. ಸಹಕಾರ ಚುನಾವಣಾ ಪ್ರಾಧಿಕಾರವು ಮತದಾರರ ಪಟ್ಟಿಯ ತಯಾರಿಕೆಗಾಗಿ ಮತ್ತು ಚುನಾವಣೆಗಳನ್ನು ನಡೆಸುವುದಕ್ಕಾಗಿ ಪೂರ್ವಸಿದ್ಧತಾ ಕಾರ್ಯವನ್ನು ಸಹಕಾರ ಸಂಘದ ಮಂಡಲಿಯ ಪದಾವಧಿಯ ಮುಕ್ತಾಯದ ಹಿಂದಿನ ಕೊನೆಯ ಆರು ತಿಂಗಳ ಅವಧಿಯಲ್ಲಿ ಪ್ರಾರಂಭಿಸಬಹುದಾಗಿರುತ್ತದೆ. ಅಧಿನಿಯಮ ಪ್ರಕರಣ 39-ಎಎ(15)(ಎ)ರೀತ್ಯಾ ಪ್ರತಿಯೊಂದು ಸಹಕಾರ ಸಂಘದ ಮಂಡಲಿಯು ತನ್ನ ಪದಾವಧಿಯ ಮುಕ್ತಾಯದ ಬಗ್ಗೆ ಅಂಥ ಪದಾವಧಿಯು ಮುಕ್ತಾಯವಾಗುವ ದಿನಾಂಕಕ್ಕೆ ಹಿಂದಿನ ಕನಿಷ್ಠ 6 ತಿಂಗಳಿಗೆ ಮುಂಚೆ ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ತಿಳಿಸತಕ್ಕದ್ದಾಗಿದೆ. ಅಲ್ಲದೇ ಪ್ರಾಧಿಕಾರವು ಸುಗಮವಾಗಿ ಮತದಾರರ ಪಟ್ಟಿಗಳನ್ನು ತಯಾರಿಸುವುದಕ್ಕೆ ಮತ್ತು ಚುನಾವಣೆಗಳನ್ನು ನಡೆಸುವುದಕ್ಕೆ ಸಂಬಂಧಪಟ್ಟವರು ಅವಶ್ಯಕವಾದ ಎಲ್ಲಾ ನೆರವು, ಸಹಾಯ ಮತ್ತು ಸಹಕಾರವನ್ನು ನೀಡತಕ್ಕದ್ದಾಗಿದೆ. ಅಲ್ಲದೇ ಚುನಾವಣಾ ಪ್ರಾಧಿಕಾರಕ್ಕೆ / ಜಿಲ್ಲಾ ಚುನಾವಣಾಧಿಕಾರಿಗಳಿಗೆ ಅಗತ್ಯ ಪುಸ್ತಕಗಳು, ದಾಖಲೆಗಳು ಹಾಗೂ ಮಾಹಿತಿಯನ್ನು ನೀಡುವ ಜವಾಬ್ದಾರಿ ಸಂಬಂಧಿಸಿದ ಸಹಕಾರ ಸಂಘಗಳದ್ದಾಗಿರುತ್ತದೆ.

ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ನಿಯಮಗಳು 2013ರ ನಿಯಮ-13ಡಿ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು 2013ರ ನಿಯಮ-5ಬಿ(3)ಗಳ ಅವಕಾಶದಂತೆ ಜಿಲ್ಲಾ ಚುನಾವಣಾಧಿಕಾರಿಯು ಕೂಲಂಕುಷ ಪರಿಶೀಲನೆಯ ನಂತರ, ಆಡಳಿತ ಮಂಡಲಿಗಳ ಪದಾವಧಿಯು ಮುಕ್ತಾಯವಾಗುವ ದಿನಾಂಕಕ್ಕೆ ಕನಿಷ್ಠ 120 ದಿನಗಳ ಪೂರ್ವದಲ್ಲಿ ಈ ಕೆಳಕಂಡ ವಿವರಗಳನ್ನೊಳಗೊಂಡ, ಚುನಾವಣೆಗಳು ಸನ್ನಿಹಿತವಾಗಿರುವ ಎಲ್ಲಾ ಸಹಕಾರ ಸಂಘಗಳ/ ಸಹಕಾರಿಗಳ ಕ್ರೋಢೀಕೃತ ಮತ್ತು ಸಂಘಗಳವಾರು ಮಾಹಿತಿಯನ್ನು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದಾಗಿದೆ.

ಈ ಬಗ್ಗೆ ಚುನಾವಣಾ ಪ್ರಾಧಿಕಾರದಿಂದ ಹೊರಡಿಸಲಾದ ಸಮಗ್ರ ಸುತ್ತೋಲೆಯಲ್ಲಿ 2013 ಮತ್ತು 2014ರ ಅವಧಿಗೆ ಚುನಾವಣೆ ನಡೆಸಬೇಕಾದ ಸಂಘಗಳ / ಸಹಕಾರಿಗಳ ಪಟ್ಟಿಯಲ್ಲಿ ಸ್ಥಗಿತಗೊಂಡ, ಕಾರ್ಯನಿರ್ವಹಿಸದ, ಸಂಘಗಳ ಲಭ್ಯತೆ ಇಲ್ಲದಿರುವ ಸಂಘಗಳ ಹೆಸರುಗಳು ಮತ್ತು ಈಗಾಗಲೇ ಚುನಾವಣೆ ಆಗಿರುವ ಸಂಘಗಳು ಹಾಗೂ ಚುನಾವಣೆ ಮುಂದಿನ ವರ್ಷಕ್ಕೆ ಬಾಕಿ ಇರುವ ಸಂಘಗಳ ಪಟ್ಟಿ ಸಲ್ಲಿಸಿರುವುದನ್ನು ಗಮನದಲ್ಲಿಟ್ಟುಕೊಂಡು ಸಂಘವಾರು ಮತ್ತು ಕ್ರೋಢೀಕೃತ ಸರಿಯಾದ ಮಾಹಿತಿಯನ್ನು ಸಲ್ಲಿಸಲು ಹಾಗೂ ಪಟ್ಟಿಯ ಮಾಹಿತಿಯಲ್ಲಿ ನ್ಯೂನತೆ / ಲೋಪದೋಷಗಳು ಕಂಡುಬಂದಲ್ಲಿ ಸಂಬಂಧಿಸಿದ ಕಾರ್ಯವ್ಯಾಪ್ತಿಯ ನಿಬಂಧಕರು ಹೊಣೆಗಾರರಾಗುವರು ಎಂದು ತಿಳಿಸಲಾಗಿದೆ. ಇದರಿಂದಾಗಿ ಸಕಾಲಕ್ಕೆ ಚುನಾವಣೆ ನಡೆಸಲು ವಿಳಂಬವಾದಲ್ಲಿ ಸಕ್ಷಮ ನಿಬಂಧಕರು ಆಡಳಿತಗಾರರನ್ನು ನೇಮಕಾತಿ ಮಾಡಿ ನಂತರ ಚುನಾವಣೆ ನಡೆಸಬೇಕಾಗುತ್ತದೆ. ಈ ಬಗ್ಗೆ ಸಕಾಲಿಕ ಕ್ರಮ ಕೈಗೊಳ್ಳಲು ಸಕ್ಷಮ ನಿಬಂಧಕರು ಜವಾಬ್ದಾರರಾಗಿರುತ್ತಾರೆ.

........2/-

ಗೌರವ ಕರ್ನಾಟಕ ಉಚ್ಚನ್ಯಾಯಾಲಯ ರಿಟ್ ಅಪೀಲು ಸಂಖ್ಯೆ : 734/2014 ಮತ್ತು ಸಂಬಂಧಿತ ಇತರ ಮೇಲ್ಮನವಿಗಳಲ್ಲಿ ನೀಡಿರುವ ತೀರ್ಪಿನಂತೆ ಸಹಕಾರ ಸಂಘಗಳ / ಸಹಕಾರಿಗಳ ಆಡಳಿತ ಮಂಡಳಿ ಪದಾವಧಿಯು ಚುನಾವಣೆ ದಿನಾಂಕದಿಂದ ಐದು(5) ವರ್ಷಗಳಾಗಿರತಕ್ಕದ್ದು. ಅದೇರೀತಿಯಲ್ಲಿ 29-ಎಫ್(4) ಸಹಕಾರ ಸಂಘಗಳ / ಸಹಕಾರಿಗಳ / ಪದಾಧಿಕಾರಿಗಳ ಪದಾವಧಿಯ ಚುನಾವಣೆಯ ದಿನಾಂಕದಿಂದ ಐದು ವರ್ಷಗಳಾಗಿರತಕ್ಕದ್ದು. ಪದಾಧಿಕಾರಿಗಳ ಅವಧಿಯು ಆಡಳಿತ ಮಂಡಳಿಯ ಅವಧಿಯೊಂದಿಗೆ ಅಂತ್ಯಗೊಳ್ಳುತ್ತದೆ. ಈ ಸಂಬಂಧವಾಗಿ ಉಲ್ಲೇಖಿತ ದಿನಾಂಕ : 30-06-2014ರ ಪತ್ರದಲ್ಲಿ ಎಲ್ಲಾ ಪ್ರಾಂತೀಯ ಜಂಟಿನಿಬಂಧಕರಿಗೆ / ಜಿಲ್ಲಾ ಉಪನಿಬಂಧಕರುಗಳಿಗೆ / ಉಪವಿಭಾಗೀಯ ಸಹಾಯಕ ನಿಬಂಧಕರುಗಳಿಗೆ ಈಗಾಗಲೇ ತಿಳಿಸಲಾಗಿದೆ.

1. ಸಹಕಾರ ಸಂಘದ /ಸಹಕಾರಿಯ ಹೆಸರು ಮತ್ತು ವಿಳಾಸ
2. ಆಡಳಿತ ಮಂಡಲಿಗೆ ಆಯ್ಕೆಯಾಗಬೇಕಾಗಿರುವ ಚುನಾಯಿತ ನಿರ್ದೇಶಕರ ಸಂಖ್ಯೆ.
3. ಆಡಳಿತ ಮಂಡಲಿ ಪದಾವಧಿಯು ಮುಕ್ತಾಯವಾಗುವ ದಿನಾಂಕ
4. ಚುನಾವಣೆಗಳನ್ನು ನಡೆಸಬಹುದಾದ ಸ್ಥಳ ಹಾಗೂ ಚುನಾವಣಾ ಪ್ರಾಧಿಕಾರಕ್ಕೆ ಅವಶ್ಯವಿರುವ ಇತರೆ ಮಾಹಿತಿಗಳು.

ಪ್ರಾಥಮಿಕ ಸಹಕಾರ ಸಂಘಗಳಿಗೆ/ ಸಹಕಾರಿಗಳಿಗೆ ಸಂಬಂಧಿಸಿದಂತೆ ಜಿಲ್ಲಾ ಚುನಾವಣಾಧಿಕಾರಿಗಳನ್ನು ನೇಮಿಸುವ ಸಂಬಂಧ ಪ್ರಾಧಿಕರವು ಈಗಾಗಲೇ ಸಂಖ್ಯೆ : ಸಚುಆ/16/2013-14 ದಿನಾಂಕ : 03-07-2013ರಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪನಿಬಂಧಕರುಗಳನ್ನು ಆಯಾ ಜಿಲ್ಲೆಯ ಜಿಲ್ಲಾ ಚುನಾವಣಾಧಿಕಾರಿಗಳನ್ನಾಗಿ ಮುಂದಿನ ಆದೇಶದವರೆಗೆ ನೇಮಕ ಮಾಡಲಾಗಿದ್ದು, ಸದರಿ ಆದೇಶವು ಪ್ರಸಕ್ತ ಸಾಲಿಗೂ ಅನ್ವಯವಾಗುತ್ತದೆ ಎಂಬುದನ್ನು ಈ ಮೂಲಕ ಸ್ಪಷ್ಟಪಡಿಸಲಾಗಿದೆ. ಏಪ್ರಿಲ್‌ನಿಂದ ಡಿಸೆಂಬರ್-2015ರವರೆಗೆ ಮಂಡಲಿಯ ಪದಾವಧಿಯು ಮುಗಿಯಲಿರುವ ಪ್ರಕರಣಗಳಲ್ಲಿ ಎಲ್ಲಾ ರೀತಿಯ ಪ್ರಾಥಮಿಕ ಹಂತದ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ಸಂಬಂಧಿಸಿದಂತೆ ಮಂಡಲಿಯ ಮುಂದಿನ ಅವಧಿಗೆ ಚುನಾವಣೆ ನಡೆಸುವ ಬಗ್ಗೆ ಸಹಕಾರ ಚುನಾವಣಾ ಪ್ರಾಧಿಕಾರ ಮತ್ತು ಪ್ರಾಧಿಕಾರದಿಂದ ನೇಮಕಾತಿ ಮಾಡಲ್ಪಡುವ ಜಿಲ್ಲಾಚುನಾವಣಾಧಿಕಾರಿಗಳು ಹಾಗೂ ಜಿಲ್ಲಾಉಪನಿಬಂಧಕರುಗಳು ಈಬಗ್ಗೆ ಅಗತ್ಯ ಮುಂದಿನ ಕ್ರಮ ಕೈಗೊಳ್ಳಬೇಕಾಗಿರುತ್ತದೆ.

ಈಗಾಗಲೇ ಸ್ಪಷ್ಟಪಡಿಸಿರುವಂತೆ ಜಿಲ್ಲಾ ಉಪನಿಬಂಧಕರುಗಳು ಹಾಗೂ ಎಲ್ಲಾರೀತಿಯ ಪ್ರಾಥಮಿಕ ಹಂತದ ಸಹಕಾರ ಸಂಘಗಳ / ಸಹಕಾರಿಗಳಿಗೆ ಚುನಾವಣೆ ನಡೆಸಲು ಜಿಲ್ಲಾ ಚುನಾವಣಾಧಿಕಾರಿಗಳಾಗಿ ಪ್ರಸಕ್ತ ಸಾಲಿಗೂ ಮುಂದುವರೆಯುತ್ತಿರುವ ಕಾರಣ ಪ್ರಾಧಿಕಾರದಿಂದ ಈಗಾಗಲೇ ಕಾಲಕಾಲಕ್ಕೆ ನೀಡಲಾದ ನಿರ್ದೇಶನಗಳು ಮತ್ತು ಹೊರಡಿಸಲಾದ ಸುತ್ತೋಲೆಗಳನ್ವಯ ಕಾರ್ಯನಿರ್ವಹಿಸುವ ಬಗ್ಗೆ ಅಗತ್ಯಕ್ರಮ ಕೈಗೊಳ್ಳತಕ್ಕದ್ದಾಗಿದೆ.

ಏಪ್ರಿಲ್‌ನಿಂದ ಡಿಸೆಂಬರ್-2015ರ ಒಳಗಾಗಿ ಅವಧಿಮುಗಿಯಲಿರುವ ಎಲ್ಲಾ ರೀತಿಯ ಪ್ರಾಥಮಿಕ ಹಂತದ ಸಹಕಾರ ಸಂಘಗಳ / ಸಹಕಾರಿಗಳ ಮಂಡಲಿಗಳ ಸಾಮಾನ್ಯ ಚುನಾವಣೆ ಮತ್ತು ಪದಾಧಿಕಾರಿಗಳ ಚುನಾವಣೆಗಳನ್ನು ನಿಯಮಾನುಸಾರ ನಡೆಸಬೇಕಾದ ಹಿನ್ನೆಲೆಯಲ್ಲಿ ಸಹಕಾರ ಚುನಾವಣಾ ಪ್ರಾಧಿಕಾರವು ಈ ಕೆಳಕಂಡ ಅವಧಿಯಲ್ಲಿ ಪ್ರಾಥಮಿಕ ಹಂತದ ಎಲ್ಲಾ ರೀತಿಯ ಸಹಕಾರ ಸಂಘಗಳ / ಸಹಕಾರಿಗಳ ಮಂಡಲಿ ಚುನಾವಣೆಯನ್ನು ನಡೆಸಲು ಈ ಕೆಳಕಂಡ ದಿನಾಂಕಗಳನ್ನು ಗೊತ್ತುಪಡಿಸಲಾಗಿದೆ. ಅದರಂತೆ ಚುನಾವಣೆಗಳನ್ನು ನಡೆಸಲು ಜಿಲ್ಲಾ ಚುನಾವಣಾಧಿಕಾರಿಗಳು ಅಗತ್ಯ ಕ್ರಮವಿಡತಕ್ಕದ್ದು.

**<u>ದಿನಾಂಕ: 02.03.2015 ರಿಂದ 31.12.2015ರವರೆಗೆ ಪದಾವಧಿ ಮುಗಿಯಲಿರುವ ಎಲ್ಲಾ ರೀತಿಯ ಪ್ರಾಥಮಿಕ ಹಂತದ ಸಹಕಾರ ಸಂಘಗಳಿಗೆ / ಸಹಕಾರಿಗಳಿಗೆ ಚುನಾವಣೆಯನ್ನು ನಡೆಸಲು ಗೊತ್ತುಪಡಿಸಲಾದ ದಿನಾಂಕಗಳು.</u>**

| ಕ್ರ ಸಂ | ಅವಧಿ ಮುಕ್ತಾಯಗೊಳ್ಳಲಿರುವ ದಿನಾಂಕ | ಚುನಾವಣೆ ನಡೆಸಬೇಕಾದ ಅವಧಿ /ದಿನಾಂಕ |
|---|---|---|
| 1 | ದಿನಾಂಕ : 01.04.2015 ರಿಂದ 30.04.2015 ರವರೆಗೆ ಚುನಾವಣೆ ನಡೆಸಲು ಬಾಕಿ ಇರುವ ಎಲ್ಲಾ ರೀತಿಯ ಪ್ರಾಥಮಿಕ ಹಂತದ ಸಂಘಗಳ/ಸಹಕಾರಿಗಳ ಚುನಾವಣೆಗಳು. | ಶನಿವಾರ 21.03.2015 / ಭಾನುವಾರ 22.03.2015 |
| | ದಿನಾಂಕ 21.03.2015 ಮತ್ತು 22.03.2015 ರಂದು ಕಾರಣಾಂತರಗಳಿಂದ ಚುನಾವಣೆ ನಡೆಸಲು ಸಾಧ್ಯವಾಗದ ಪದಾವಧಿಯೊಳಗೆ ಚುನಾವಣೆ ನಡೆಸಲು ಅವಕಾಶವಿರುವ ಸಂಘಗಳ / ಸಹಕಾರಿಗಳ ಚುನಾವಣೆಗಳು. | ಭಾನುವಾರ 29.03.2015 / ಸೋಮವಾರ 30.03.2015 |

| | | |
|---|---|---|
| 2 | ದಿನಾಂಕ : 01.05.2015 ರಿಂದ 31.05.2015 ರವರೆಗೆ ಚುನಾವಣೆ ನಡೆಸಲು ಬಾಕಿ ಇರುವ ಎಲ್ಲಾ ರೀತಿಯ ಪ್ರಾಥಮಿಕ ಹಂತದ ಸಂಘಗಳ/ಸಹಕಾರಿಗಳ ಚುನಾವಣೆಗಳು. | ಶನಿವಾರ 18.04.2015 / ಭಾನುವಾರ 19.04.2015 |
| | ದಿನಾಂಕ 18.04.2015 ಮತ್ತು 19.04.2015 ರಂದು ಕಾರಣಾಂತರಗಳಿಂದ ಚುನಾವಣೆ ನಡೆಸಲು ಸಾಧ್ಯವಾಗದ ಪದಾವಧಿಯೊಳಗೆ ಚುನಾವಣೆ ನಡೆಸಲು ಅವಕಾಶವಿರುವ ಸಂಘಗಳ / ಸಹಕಾರಿಗಳ ಚುನಾವಣೆಗಳು. | ಭಾನುವಾರ 26.04.2015 / ಸೋಮವಾರ 27.04.2015 |
| 3 | ದಿನಾಂಕ : 01.06.2015 ರಿಂದ 30.06.2015 ರವರೆಗೆ ಚುನಾವಣೆ ನಡೆಸಲು ಬಾಕಿ ಇರುವ ಎಲ್ಲಾ ರೀತಿಯ ಪ್ರಾಥಮಿಕ ಹಂತದ ಸಂಘಗಳ/ಸಹಕಾರಿಗಳ ಚುನಾವಣೆಗಳು. | ಶನಿವಾರ 23.05.2015 / ಭಾನುವಾರ 24.05.2015 |
| | ದಿನಾಂಕ 23.05.2015 ಮತ್ತು 24.05.2015 ರಂದು ಕಾರಣಾಂತರಗಳಿಂದ ಚುನಾವಣೆ ನಡೆಸಲು ಸಾಧ್ಯವಾಗದ ಪದಾವಧಿಯೊಳಗೆ ಚುನಾವಣೆ ನಡೆಸಲು ಅವಕಾಶವಿರುವ ಸಂಘಗಳ / ಸಹಕಾರಿಗಳ ಚುನಾವಣೆಗಳು. | ಶನಿವಾರ 30.05.2015 / ಭಾನುವಾರ 31.05.2015 |
| 4 | ದಿನಾಂಕ : 01.07.2015 ರಿಂದ 31.07.2015 ರವರೆಗೆ ಚುನಾವಣೆ ನಡೆಸಲು ಬಾಕಿ ಇರುವ ಎಲ್ಲಾ ರೀತಿಯ ಪ್ರಾಥಮಿಕ ಹಂತದ ಸಂಘಗಳ/ಸಹಕಾರಿಗಳ ಚುನಾವಣೆಗಳು. | ಶನಿವಾರ 20.06.2015 / ಭಾನುವಾರ 21.06.2015 |
| | ದಿನಾಂಕ 20.06.2015 ಮತ್ತು 21.06.2015 ರಂದು ಕಾರಣಾಂತರಗಳಿಂದ ಚುನಾವಣೆ ನಡೆಸಲು ಸಾಧ್ಯವಾಗದ ಪದಾವಧಿಯೊಳಗೆ ಚುನಾವಣೆ ನಡೆಸಲು ಅವಕಾಶವಿರುವ ಸಂಘಗಳ / ಸಹಕಾರಿಗಳ ಚುನಾವಣೆಗಳು. | ಭಾನುವಾರ 28.06.2015 / ಸೋಮವಾರ 29.06.2015 |
| 5 | ದಿನಾಂಕ : 01.08.2015 ರಿಂದ 31.08.2015 ರವರೆಗೆ ಚುನಾವಣೆ ನಡೆಸಲು ಬಾಕಿ ಇರುವ ಎಲ್ಲಾ ರೀತಿಯ ಪ್ರಾಥಮಿಕ ಹಂತದ ಸಂಘಗಳ/ಸಹಕಾರಿಗಳ ಚುನಾವಣೆಗಳು. | ಶನಿವಾರ 25.07.2015 / ಭಾನುವಾರ 26.07.2015 |
| | ದಿನಾಂಕ 25.072015 ಮತ್ತು 26.07.2015 ರಂದು ಕಾರಣಾಂತರಗಳಿಂದ ಚುನಾವಣೆ ನಡೆಸಲು ಸಾಧ್ಯವಾಗದ ಪದಾವಧಿಯೊಳಗೆ ಚುನಾವಣೆ ನಡೆಸಲು ಅವಕಾಶವಿರುವ ಸಂಘಗಳ / ಸಹಕಾರಿಗಳ ಚುನಾವಣೆಗಳು. | ಗುರುವಾರ 30.07.2015 / ಶುಕ್ರವಾರ 31.07.2015 |
| 6 | ದಿನಾಂಕ : 01.09.2015 ರಿಂದ 30.09.2015 ರವರೆಗೆ ಚುನಾವಣೆ ನಡೆಸಲು ಬಾಕಿ ಇರುವ ಎಲ್ಲಾ ರೀತಿಯ ಪ್ರಾಥಮಿಕ ಹಂತದ ಸಂಘಗಳ/ಸಹಕಾರಿಗಳ ಚುನಾವಣೆಗಳು. | ಶನಿವಾರ 22.08.2015 / ಭಾನುವಾರ 23.08.2015 |
| | ದಿನಾಂಕ 22.08.2015 ಮತ್ತು 23.08.2015 ರಂದು ಕಾರಣಾಂತರಗಳಿಂದ ಚುನಾವಣೆ ನಡೆಸಲು ಸಾಧ್ಯವಾಗದ ಪದಾವಧಿಯೊಳಗೆ ಚುನಾವಣೆ ನಡೆಸಲು ಅವಕಾಶವಿರುವ ಸಂಘಗಳ / ಸಹಕಾರಿಗಳ ಚುನಾವಣೆಗಳು. | ಭಾನುವಾರ 30.08.2015 / ಸೋಮವಾರ 31.08.2015 |
| 7 | ದಿನಾಂಕ : 01.10.2015 ರಿಂದ 31.10.2015 ರವರೆಗೆ ಚುನಾವಣೆ ನಡೆಸಲು ಬಾಕಿ ಇರುವ ಎಲ್ಲಾ ರೀತಿಯ ಪ್ರಾಥಮಿಕ ಹಂತದ ಸಂಘಗಳ/ಸಹಕಾರಿಗಳ ಚುನಾವಣೆಗಳು. | ಶನಿವಾರ 19.09.2015 / ಭಾನುವಾರ 20.09.2015 |
| | ದಿನಾಂಕ 19.09.2015 ಮತ್ತು 20.09.2015 ರಂದು ಕಾರಣಾಂತರಗಳಿಂದ ಚುನಾವಣೆ ನಡೆಸಲು ಸಾಧ್ಯವಾಗದ ಪದಾವಧಿಯೊಳಗೆ ಚುನಾವಣೆ ನಡೆಸಲು ಅವಕಾಶವಿರುವ ಸಂಘಗಳ / ಸಹಕಾರಿಗಳ ಚುನಾವಣೆಗಳು. | ಭಾನುವಾರ 27.09.2015 / ಸೋಮವಾರ 28.09.2015 |
| 8 | ದಿನಾಂಕ : 01.11.2015 ರಿಂದ 30.11.2015 ರವರೆಗೆ ಚುನಾವಣೆ ನಡೆಸಲು ಬಾಕಿ ಇರುವ ಎಲ್ಲಾ ರೀತಿಯ ಪ್ರಾಥಮಿಕ ಹಂತದ ಸಂಘಗಳ/ಸಹಕಾರಿಗಳ ಚುನಾವಣೆಗಳು. | ಶನಿವಾರ 17.10.2015 / ಭಾನುವಾರ 18.10.2015 |
| | ದಿನಾಂಕ 17.10.2015 ಮತ್ತು 18.10.2015 ರಂದು ಕಾರಣಾಂತರಗಳಿಂದ ಚುನಾವಣೆ ನಡೆಸಲು ಸಾಧ್ಯವಾಗದ ಪದಾವಧಿಯೊಳಗೆ ಚುನಾವಣೆ ನಡೆಸಲು ಅವಕಾಶವಿರುವ ಸಂಘಗಳ / ಸಹಕಾರಿಗಳ ಚುನಾವಣೆಗಳು. | ಶುಕ್ರವಾರ 30.10.2015 / ಶನಿವಾರ 31.10.2015 |

..........4/-

| | | |
|---|---|---|
| 9 | ದಿನಾಂಕ : 01.12.2015 ರಿಂದ 31.12.2015 ರವರೆಗೆ ಚುನಾವಣೆ ನಡೆಸಲು ಬಾಕಿ ಇರುವ ಎಲ್ಲಾ ರೀತಿಯ ಪ್ರಾಥಮಿಕ ಹಂತದ ಸಂಘಗಳ/ಸಹಕಾರಿಗಳ ಚುನಾವಣೆಗಳು. | ಶನಿವಾರ 21.11.2015 / ಭಾನುವಾರ 22.11.2015 |
| | ದಿನಾಂಕ 21.11.2015 ಮತ್ತು 22.11.2015 ರಂದು ಕಾರಣಾಂತರಗಳಿಂದ ಚುನಾವಣೆ ನಡೆಸಲು ಸಾಧ್ಯವಾಗದ ಪದಾವಧಿಯೊಳಗೆ ಚುನಾವಣೆ ನಡೆಸಲು ಅವಕಾಶವಿರುವ ಸಂಘಗಳ / ಸಹಕಾರಿಗಳ ಚುನಾವಣೆಗಳು. | ಭಾನುವಾರ 29.11.2015 / ಸೋಮವಾರ 30.11.2015 |

ಅಧಿನಿಯಮ ಪ್ರಕರಣ–28ಎ(3) ರೀತ್ಯಾ ಕಾಲಕಾಲಕ್ಕೆ ಸರ್ಕಾರ / ಸಹಕಾರ ಸಂಘಗಳ ನಿಬಂಧಕರಿಂದ ಹೊರಡಿಸಲಾದ ಸುತ್ತೋಲೆ / ನಿರ್ದೇಶನಗಳನ್ವಯ ಅಗತ್ಯ ಕ್ರಮ ಕೈಗೊಳ್ಳಲು ಜಿಲ್ಲಾ ಚುನಾವಣಾಧಿಕಾರಿಗಳು ಜವಾಬ್ದಾರರಾಗಿರುತ್ತಾರೆ.

ಅಧಿನಿಯಮ ಪ್ರಕರಣ–28ಬಿ ರೀತ್ಯಾ ಹೊಸದಾಗಿ ಚುನಾಯಿತವಾದ ಮಂಡಲಿಯ ಸದಸ್ಯರು ನಿರ್ಗಮಿಸುತ್ತಿರುವ ಮಂಡಲಿಯ ಪದಾವಧಿಯು ಮುಕ್ತಾಯವಾದ ಕೂಡಲೇ ಪದಧಾರಣ ಮಾಡಲು ಅರ್ಹರಾಗಿರುತ್ತಾರೆ. ಮಂಡಲಿಯ ಸದಸ್ಯರ ಸಾಮಾನ್ಯ ಚುನಾವಣೆಯನ್ನು ಮೇಲ್ಕಂಡ ಅವಧಿಯಲ್ಲಿ ನಡೆಸಿದ ನಂತರ ಪದಾಧಿಕಾರಿಗಳ ಚುನಾವಣೆಯನ್ನು ನಡೆಸತಕ್ಕದ್ದು.

ಸಂಬಂಧಿಸಿದ ಸಹಕಾರ ಸಂಘಗಳ / ಸಹಕಾರಿಗಳ ಆಡಳಿತ ಮಂಡಳಿ ಮತ್ತು ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ಆಯಾ ವರ್ಗಗಳಿಗೆ ಗೊತ್ತುಪಡಿಸಲಾದ ಅವಧಿಯಲ್ಲಿ ಮಂಡಲಿಯ ಮತ್ತು ಪದಾಧಿಕಾರಿಗಳ ಚುನಾವಣೆಗಳನ್ನು ಸುಲಲಿತವಾಗಿ / ನಿಯಮಾನುಸಾರ ಮತ್ತು ಪಾರದರ್ಶಕವಾಗಿ ನಡೆಸುವ ಬಗ್ಗೆ ಜಿಲ್ಲಾಚುನಾವಣಾಧಿಕಾರಿಗಳಿಗೆ ಮತ್ತು ರಿರ್ಟನಿಂಗ್ / ಸಹಾಯಕ ರಿರ್ಟನಿಂಗ್ ಆಫೀಸರ್‌ಗಳಿಗೆ ಅಗತ್ಯ ನೆರವು ನೀಡತಕ್ಕದ್ದು.

ಜಿಲ್ಲಾ ಚುನಾವಣಾಧಿಕಾರಿಗಳು / ರಿಟರ್ನಿಂಗ್ ಅಧಿಕಾರಿಗಳು ಚುನಾವಣೆ ನಡೆಸುವ ಸಂಬಂಧ ವಿವಿಧ ಹಂತಗಳಲ್ಲಿ ಕೈಗೊಳ್ಳಬೇಕಾದ ಪ್ರಕ್ರಿಯೆಗಳನ್ನು ಕುರಿತು ಅಧಿಸೂಚನೆಗೆ ಲಗತ್ತಿಸಿರುವ ಚೆಕ್‌ಲಿಸ್ಟ್‌ನ ಸೂಚನೆಗಳಂತೆ ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು.

ಜಿಲ್ಲಾಉಪನಿಬಂಧಕರುಗಳು 2015ರಲ್ಲಿ ಏಪ್ರಿಲ್‌ನಿಂದ ಡಿಸೆಂಬರ್–2015ರ ತಿಂಗಳವರೆಗೆ ಚುನಾವಣೆ ನಡೆಸಲು ಬಾಕಿ ಇರುವ ಎಲ್ಲಾ ರೀತಿಯ ಪ್ರಾಥಮಿಕ ಹಂತದ ಸಹಕಾರ ಸಂಘಗಳ ಚುನಾವಣೆಯನ್ನು ಆಯೋಗದ ಪರವಾಗಿ ನಿಯಮಾನುಸಾರ ಮತ್ತು ಪಾರದರ್ಶಕವಾಗಿ ಸಕಾಲಕ್ಕೆ ನಡೆಸಲು ಜವಾಬ್ದಾರರಾಗಿರುತ್ತಾರೆ.

**(ಎನ್.ಸಿ. ಮುನಿಯಪ್ಪ)**
**ಆಯುಕ್ತರು,**
**ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು**

**ಇವರಿಗೆ:–**

1. ರಾಜ್ಯದ ಎಲ್ಲಾ ಪ್ರಾಂತೀಯ ಸಹಕಾರ ಸಂಘಗಳ ಜಂಟಿ ನಿಬಂಧಕರುಗಳಿಗೆ ಸೂಕ್ತ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಜಿಲ್ಲೆಗಳ ಸಹಕಾರ ಸಂಘಗಳ ಉಪನಿಬಂಧಕರು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳ ಸೂಕ್ತ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಉಪವಿಭಾಗಗಳ ಸಹಕಾರ ಸಂಘಗಳ ಸಹಾಯಕ ನಿಬಂಧಕರುಗಳಿಗೆ ಸೂಕ್ತ ಕ್ರಮಕ್ಕಾಗಿ
4. ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕುಗಳ ವ್ಯವಸ್ಥಾಪಕ ನಿರ್ದೇಶಕರುಗಳಿಗೆ ಸೂಕ್ತ ಕ್ರಮಕ್ಕಾಗಿ
5. ರಾಜ್ಯದ ಎಲ್ಲಾ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟಗಳ ವ್ಯವಸ್ಥಾಪಕ ನಿರ್ದೇಶಕರುಗಳಿಗೆ ಸೂಕ್ತ ಕ್ರಮಕ್ಕಾಗಿ.

**ಪ್ರತಿಗಳು:–**

1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿಗಳ ಕಟ್ಟಡ, 6ನೇ ಮಹಡಿ, ಬೆಂಗಳೂರು–01.
2. ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ ರಾಜ್ಯ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–52
3. ಸಹಕಾರ ಸಂಘಗಳ ನಿಬಂಧಕರ ಕಛೇರಿಯ ಎಲ್ಲಾ ಅಪರ ನಿಬಂಧಕರು / ಜಂಟಿ ನಿಬಂಧಕರುಗಳಿಗೆ
4. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ
5. ರಾಜ್ಯದ ಎಲ್ಲಾ ಜಿಲ್ಲೆಗಳ ಆರಕ್ಷಕ ಅಧೀಕ್ಷಕರಿಗೆ.

..........5/-

**ಪ್ರಾಥಮಿಕ ಹಂತದ ಸಹಕಾರ ಸಂಘಗಳ / ಸಹಕಾರಿಗಳ ಆಡಳಿತ ಮಂಡಲಿಗೆ / ಪದಾಧಿಕಾರಿಗಳ ಸ್ಥಾನಗಳಿಗೆ ಚುನಾವಣೆ ನಡೆಸುವ ಬಗ್ಗೆ ಜಿಲ್ಲಾ ಚುನಾವಣಾಧಿಕಾರಿಗಳು ಕೈಗೊಳ್ಳಬಹುದಾದ ಕ್ರಮ ಕುರಿತಂತೆ ಚೆಕ್‌ಲಿಸ್ಟ್.**

ಸಂಖ್ಯೆ: ಸಚುಪ್ರಾ/ಚುನಾವಣೆ/ಏಪ್ರಿಲ್-ಡಿಸೆಂಬರ್/ 02 /2015 ದಿನಾಂಕ: 23.02.2015

| ಕ್ರ. ಸಂ | ವಿವರ | ಷರಾ |
|---|---|---|
| 1 | ದಿನಾಂಕ : 01.04.2015 ರಿಂದ 31.12.2015ರವರೆಗೆ ಅವಧಿ ಮುಗಿಯುವ ಸಹಕಾರ ಸಂಘಗಳ ಆಡಳಿತ ಮಂಡಲಿಗೆ ಚುನಾವಣೆ / ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆ ನಡೆಸುವಿಕೆ – ಸಹಕಾರ ಸಂಘಗಳ /ಸಹಕಾರಿಗಳ ಪಟ್ಟಿಯನ್ನು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಕಳುಹಿಸುವಿಕೆ. | ಸಹಕಾರ ಚುನಾವಣಾ ಆಯೋಗದ ಸುತ್ತೋಲೆ ಕ್ರಮಾಂಕ : ಸಚುಆ/ಚುನಾವಣೆ/ಮಾಹಿತಿ/54/2014 ದಿನಾಂಕ 31-05-2014 ರಲ್ಲಿ ಸೂಚಿಸಿರುವಂತೆ ಜಿಲ್ಲಾ ಸಹಕಾರ ಸಂಘಗಳ ಉಪನಿಬಂಧಕರು ಹಾಗೂ ಜಿಲ್ಲಾಚುನಾವಣಾಧಿಕಾರಿಗಳು ಅಗತ್ಯ ಕ್ರಮವಿಡತಕ್ಕದ್ದು. |
| 2 | ಮೊದಲ ಹಂತದಲ್ಲಿ ಪ್ರಾಥಮಿಕ ಸಂಘಗಳು /ಸಹಕಾರಿಗಳ ಮಂಡಲಿಗಳ ಚುನಾವಣೆ ನಡೆಸುವ ಬಗ್ಗೆ ಚುನಾವಣಾ ಪ್ರಾಧಿಕಾರದಿಂದ ಚುನಾವಣೆ ನಡೆಸಬೇಕಾದ ಅವಧಿ / ದಿನಾಂಕಗಳ ಪ್ರಕಟಣೆ. | ಅಧಿಸೂಚನೆಯಲ್ಲಿ ಪ್ರಕಟಿಸಿರುವಂತೆ ಜಿಲ್ಲಾ ಚುನಾವಣಾಧಿಕಾರಿಗಳು ಸಂಬಂಧಿಸಿದವರು ಅಗತ್ಯ ಕ್ರಮವಿಡತಕ್ಕದ್ದು. |
| 3 | **ರಿಟರ್ನಿಂಗ್ ಆಫೀಸರ್ /ಸಹಾಯಕ ರಿಟರ್ನಿಂಗ್ ಆಫೀಸರ್ಸ್‌ಗಳ ನೇಮಕ–**<br>1. ದಿನಾಂಕ : 01.04.2015 ರಿಂದ 31.12.2015ರವರೆಗೆ ಮಂಡಲಿಯ ಅವಧಿ ಮುಗಿಯುವ ಸಂಘಗಳು / ಸಹಕಾರಿಗಳಿಗೆ ಸಂಬಂಧಿಸಿದಂತೆ ಸಾಮಾನ್ಯ ಚುನಾವಣೆ / ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆ ನಡೆಸಲು. | ಪ್ರತಿ ಸಹಕಾರ ಸಂಘಕ್ಕೆ / ಸಹಕಾರಿಗೆ ರಿಟರ್ನಿಂಗ್ ಆಫೀಸರ್ (ಆರ್.ಓ) ಅಗತ್ಯಕ್ಕನುಗುಣವಾಗಿ ಸಹಾಯಕ ರಿಟರ್ನಿಂಗ್ ಆಫೀಸರ್ (ಎ.ಆರ್.ಓ) ನೇಮಕಾತಿಗಾಗಿ ಕನಿಷ್ಟ ಇಬ್ಬರು ಅಧಿಕಾರಿಗಳ ಹೆಸರು/ ಹುದ್ದೆ ವಿವರಗಳನ್ನು ಸಂಘಗಳ / ಸಹಕಾರಿಗಳ ಸಂಖ್ಯೆಗೆ ಅನುಗುಣವಾಗಿ ಸಿದ್ದಪಡಿಸಿ ಜಿಲ್ಲಾ ಚುನಾವಣಾಧಿಕಾರಿಗಳು ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಸಕಾಲಕ್ಕೆ ಸಲ್ಲಿಸಿ ಆದೇಶ ಪಡೆದು ನಿಯಮಾನುಸಾರ ಚುನಾವಣೆ ನಡೆಸಲು ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು. |
| 4 | **ಮತದಾರರ ಪಟ್ಟಿಯನ್ನು ಸಿದ್ದಪಡಿಸುವಿಕೆ –ವೇಳಾಪಟ್ಟಿ ಪ್ರಕಟಣೆ. <u>ಪ್ರತಿ ಸಹಕಾರ ಸಂಘದ ಮುಖ್ಯ ಕಾರ್ಯನಿರ್ವಾಹಕನು ನಿರ್ವಹಿಸಬೇಕಾದ ಕರ್ತವ್ಯ ಮತ್ತು ಜವಾಬ್ದಾರಿಗಳು.</u>**<br>i. ಚುನಾವಣೆಯಲ್ಲಿ ಮತ ನೀಡುವ ಹಕ್ಕುಳ್ಳ ಸದಸ್ಯರ ಕರಡು ಪಟ್ಟಿ ಸಿದ್ದಪಡಿಸಿ ಸಲ್ಲಿಸುವಿಕೆ.<br>ii. ಅಂತಿಮ ಮತದಾರರ ಪಟ್ಟಿಯ ಪ್ರಕಟಣೆಗೆ ಸಿದ್ದಪಡಿಸಿದ ದಿನಾಂಕದ ಪೂರ್ವದಲ್ಲಿ ಮರುಪಾವತಿಗೆ ಬಾಕಿಯಾಗುವ ಸದಸ್ಯರ ಕರಡುಪಟ್ಟಿ ಸಿದ್ದಪಡಿಸುವಿಕೆ.<br>iii. ಸುಸ್ತಿದಾರರ ಕರಡು ಪಟ್ಟಿ ಸಿದ್ದಪಡಿಸಿ ಸಲ್ಲಿಸುವಿಕೆ<br>iv. ಅನರ್ಹತೆಗೆ ಕಾರಣಗಳನ್ನು ಸದಸ್ಯವಾರು ತೋರಿಸಿ, ಸಾಮಾನ್ಯ ಚುನಾವಣೆಯಲ್ಲಿ ಮತದಾನದ ಹಕ್ಕನ್ನು ಹೊಂದಿರದ, ಇತರ ಸದಸ್ಯರ ಕರಡುಪಟ್ಟಿ ತಯಾರಿಸಿ ಸಲ್ಲಿಸುವಿಕೆ.<br>**[ಕರ್ನಾಟಕ ಸಹಕಾರ ಸಂಘಗಳ ನಿಯಮ–13ಡಿ(5) ರಂತೆ ಚುನಾವಣಾ ದಿನಾಂಕದ ಪೂರ್ವದ ಕನಿಷ್ಟ 60 ದಿವಸಗಳ ಮುಂಚೆ]** | ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ–13ಡಿ(5) ಹಾಗೂ ಕರ್ನಾಟಕ ಸೌಹಾರ್ಧ ಸಹಕಾರಿ (ತಿದ್ದುಪಡಿ) ನಿಯಮಗಳು, 2013ರ ನಿಯಮ–5ಬಿ(1) ಗಳ ಅವಕಾಶಗಳಂತೆ ಜಿಲ್ಲಾ ಚುನಾವಣಾಧಿಕಾರಿಗಳು ಅಗತ್ಯ ಕ್ರಮ ಕೈಗೊಳ್ಳತಕ್ಕದ್ದು. |

........6/-

| | | |
|---|---|---|
| 5 | ಸಹಕಾರ ಚುನಾವಣಾ ಪ್ರಾಧಿಕಾರದ ಪರವಾಗಿ ಜಿಲ್ಲಾ ಚುನಾವಣಾಧಿಕಾರಿಯು ನಿರ್ವಹಿಸಬೇಕಾದ ಕರ್ತವ್ಯ ಮತ್ತು ಜವಾಬ್ದಾರಿಗಳು.<br>1. ಮತ ನೀಡುವ ಹಕ್ಕುಳ್ಳ ಸದಸ್ಯರ ಕರಡುಪಟ್ಟಿ, ಸುಸ್ತಿದಾರರ ಕರಡುಪಟ್ಟಿ ಹಾಗೂ ಅಂತಿಮ ಮತದಾರರ ಪಟ್ಟಿಯ ಪ್ರಕಟಣೆಗೆ ನಿಗಧಿಪಡಿಸಿದ ದಿನಾಂಕದ ಪೂರ್ವದಲ್ಲಿ ಮರುಪಾವತಿಗೆ ಬಾಕಿಯಾಗುವ ಸದಸ್ಯರ ಕರಡು ಪಟ್ಟಿಗಳನ್ನು ಪ್ರಕಟಿಸಲು ವ್ಯವಸ್ಥೆಗೊಳಿಸುವಿಕೆ.<br>2. (ಅ) ನಲ್ಲಿ ವಿವರಿಸಿದಂತೆ ಕರಡುಪಟ್ಟಿ ಪ್ರಕಟಣೆಯಾದ ನಂತರ ಅವುಗಳಿಂದ ಬಾಧಿತರಾದವರು ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸಲ್ಲಿಸಲು ಮತ್ತು ಸಾಮಾನ್ಯ ಚುನಾವಣೆಯ ಪೂರ್ವದ ಕನಿಷ್ಟ 15 ದಿನಗಳ ಮುಂಚಿತವಾಗಿ ಸುಸ್ತಿದಾರರು ಸಂಬಂಧಪಟ್ಟ ಸಹಕಾರ ಸಂಘಗಳಿಗೆ ಬಾಕಿಯನ್ನು ಮರುಪಾವತಿಸಲು ತಿಳಿಸುವಿಕೆ.<br>3. ಅಂತಿಮ ಅರ್ಹ ಮತದಾರರ ಪಟ್ಟಿಯನ್ನು ಪ್ರಕಟಿಸುವಿಕೆ. | ಚುನಾವಣಾ ದಿನಾಂಕಕ್ಕೆ ಪೂರ್ವದ ಕನಿಷ್ಟ 45 ದಿನಗಳ ಮುಂಚಿತವಾಗಿ ಪ್ರಕಟಿಸುವ ವ್ಯವಸ್ಥೆ ಮಾಡುವುದು.<br>ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ-13ಡಿ(3)(ಎ)ದ ಮತ್ತು ಸೌಹಾರ್ದ ಸಹಕಾರಿ ನಿಯಮ-5(ಎ)<br>ಕರ್ನಾಟಕ ಸಹಕಾರ ಸಂಘಗಳ ನಿಯಮಗಳು-13ಡಿ(3)(ಬಿ) ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿಅಧಿನಿಯಮ-5(ಬಿ)ಗಳ ಅವಕಾಶದಂತೆ ಚುನಾವಣಾ ದಿನಾಂಕಕ್ಕೆ ಪೂರ್ವದ 15ನೇ ದಿನದಂದು ಅಥವಾ ಮುಂಚಿತವಾಗಿ ಪ್ರಕಟಿಸತಕ್ಕದ್ದು. |
| 6 | ರಿಟರ್ನಿಂಗ್ ಅಧಿಕಾರಿಯು ಜಿಲ್ಲಾ ಚುನಾವಣಾಧಿಕಾರಿ ಗಳೊಂದಿಗೆ ಸಮಾಲೋಚಿಸಿ ಮತದಾನ ಕೇಂದ್ರಗಳನ್ನು ಗುರುತಿಸುವಿಕೆ ಮತ್ತು ಅದರ ವಿವರಗಳನ್ನು ಸಿದ್ಧಪಡಿಸುವುದು. | ಕರ್ನಾಟಕ ಸಹಕಾರ ಸಂಘಗಳ ನಿಯಮಗಳು-13ಇ(2)(ii) ಕರ್ನಾಟಕ ಸೌಹಾರ್ದ ಸಹಕಾರಿ ಸಂಘ ನಿಯಮ-5ಸಿ(2)(ii) ಮತ್ತು (iii) ರಂತೆ |
| 7 | ಮತದಾನ ಸಿಬ್ಬಂದಿ ಪಟ್ಟಿ ತಯಾರಿಸಿಕೊಂಡು ಅಗತ್ಯಕ್ಕನುಗುಣ ವಾಗಿ ಜಿಲ್ಲಾ ಚುನಾವಣಾಧಿಕಾರಿ (ಪ್ರಿಸೈಂಡಿಂಗ್) ಮತ್ತು ಚುನಾವಣಾ ಸಿಬ್ಬಂದಿ ನೇಮಕಾತಿ ಮಾಡಲು ಕ್ರಮವಿಡುವುದು. | ಕರ್ನಾಟಕ ಸಹಕಾರ ಸಂಘ ನಿಯಮಗಳು 1960ರ ನಿಯಮ-13ಎಫ್ ಮತ್ತು ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು 2013ರ ನಿಯಮ-5ಡಿ(1) ರಂತೆ. |
| 8 | ಸಾಮಾನ್ಯ ಚುನಾವಣೆಗಾಗಿ ಅಧಿಸೂಚನೆ ಹೊರಡಿಸುವ ಬಗ್ಗೆ ಜಿಲ್ಲಾ ಚುನಾವಣಾಧಿಕಾರಿಗೆ ಚುನಾವಣಾ ಪ್ರಾಧಿಕಾರ ಅನುಮತಿಸಿದೆ, | ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ 14 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು 2013ರ ನಿಯಮ-5ಇ ಮೇರೆಗೆ ಕ್ರಮವಾಗಿ ನಮೂನೆ-XI ಹಾಗೂ ನಮೂನೆ-1ಎ ನಲ್ಲಿ ಅಧಿಸೂಚನೆಯನ್ನು ಹೊರಡಿಸತಕ್ಕದ್ದು. |
| 9 | ರಿಟರ್ನಿಂಗ್ ಆಫೀಸರ್ ಉದ್ದೇಶಿತ ಚುನಾವಣೆಗಾಗಿ ನಮೂನೆ-XII ರಲ್ಲಿ ಸಾರ್ವಜನಿಕ ನೋಟೀಸ್ ನೀಡುವುದು ಮತ್ತು ಕಛೇರಿಯ ಸೂಚನಾಫಲಕದಲ್ಲಿ ಮತ್ತು ಸಹಕಾರ ಸಂಘದ ಕಛೇರಿ ಹಾಗೂ ಅವಶ್ಯಕವೆನಿಸಿದ ಇತರೆ ಸ್ಥಳಗಳಲ್ಲಿ ಪ್ರದರ್ಶಿಸುವುದು. | ಕರ್ನಾಟಕ ಸಹಕಾರ ಸಂಘ ನಿಯಮಗಳು 1960ರ ನಿಯಮ-14(3)(ಎ) ರೀತ್ಯಾ ನಮೂನೆ-XII ರಲ್ಲಿ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು 2013ರ ರೀತ್ಯಾ ನಮೂನೆ-2ಎ ದಲ್ಲಿ ಹೊರಡಿಸತಕ್ಕದ್ದು. |
| 10. | ಮಾದರಿ ನೀತಿ ಸಂಹಿತೆ | ಮಾದರಿ ನೀತಿ ಸಂಹಿತೆಯನ್ನು ಸಹಕಾರ ಚುನಾವಣಾ ಆಯೋಗವು ಈಗಾಗಲೇ ಪತ್ರ ಸಂಖ್ಯೆ:ಸಚುಆ/17/ನೀತಿಸಂಹಿತೆ/2013-14, ದಿನಾಂಕ: 03.08.2013 ಹಾಗೂ ದಿನಾಂಕ: 21.09.2013ರಲ್ಲಿ ಪ್ರಕಟಿಸಿರುವಂತೆ ಚುನಾವಣಾ ಪ್ರಕ್ರಿಯೆ ಅಂತ್ಯಗೊಳ್ಳುವವರೆಗೆ ಜಾರಿಯಲ್ಲಿರುತ್ತದೆ. |

| | | |
|---|---|---|
| 11 | ರಿಟರ್ನಿಂಗ್ ಆಫೀಸರ್ ಸಹಕಾರ ಸಂಘಗಳ ಆಡಳಿತ ಮಂಡಲಿಗೆ ಸಾಮಾನ್ಯ ಚುನಾವಣೆ ಮುಗಿದ ನಂತರ ಪದಾಧಿಕಾರಿಗಳ ಆಯ್ಕೆಗೆ ಚುನಾವಣೆಯನ್ನು ನಡೆಸುವುದು. | ಕರ್ನಾಟಕ ಸಹಕಾರ ಸಂಘಗಳ ನಿಯಮಗಳು 1960ರ ನಿಯಮ-14ಎಜಿ ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು 2013ರ ನಿಯಮ-6ರ ಅವಕಾಶಗಳಂತೆ ಪದಾಧಿಕಾರಿಗಳ ಚುನಾವಣೆಗಳನ್ನು ನಡೆಸತಕ್ಕದ್ದು |

**ಚುನಾವಣೆ ಪೂರ್ವದಲ್ಲಿ ಕೈಗೊಳ್ಳಬೇಕಾದ ಕ್ರಮಗಳು.**

| ಕ್ರಮ ಸಂಖ್ಯೆ | ವಿಷಯ | ಸುತ್ತೋಲೆ / ಪತ್ರಗಳ ಕ್ರಮಸಂಖ್ಯೆ ಮತ್ತು ದಿನಾಂಕ |
|---|---|---|
| 01 | ಸಹಕಾರ ಸಂಘಗಳ / ಸಹಕಾರಿಗಳ / ಪದಾಧಿಕಾರಿಗಳ ಸ್ಥಾನಕ್ಕೆ ಚುನಾವಣೆ ನಡೆಸುವ ಬಗ್ಗೆ ಜಿಲ್ಲಾಚುನಾವಣಾಧಿಕಾರಿಗಳು ಕಾನೂನಿಗನುಗುಣವಾಗಿ ಕಾರ್ಯನಿರ್ವಹಿಸುವ ಕುರಿತು. | ಸಂಖ್ಯೆ : ಸಚುಆ/ಚುನಾವಣೆ/15/2013-14 ದಿನಾಂಕ : 26-07-2013ರ ಪತ್ರದಲ್ಲಿನ ಕ್ರಮ ಸಂಖ್ಯೆ 01 ರಿಂದ 10ರಂತೆ ಕ್ರಮವಿಡುವುದು. ಸೂಚನೆಗಳಲ್ಲಿ ರಿಟರ್ನಿಂಗ್ ಆಫೀಸರ್ / ಅಧೀಕ್ಷಾಧಿಕಾರಿಗಳು / ನೌಕರರಿಗೆ ತರಬೇತಿ ಕುರಿತು ವ್ಯವಸ್ಥೆ ಮಾಡಲು ಸೂಚಿಸಲಾಗಿದೆ. |
| 02 | ಸಹಕಾರ ಸಂಘಗಳ / ಸೌಹಾರ್ದ ಸಹಕಾರಿಗಳ ಆಡಳಿತ ಮಂಡಳಿಗೆ ಚುನಾವಣೆ ನಡೆಸುವ ಬಗ್ಗೆ ರಿಟರ್ನಿಂಗ್ ಆಫೀಸರ್‌ಗಳಿಗೆ ನೀಡಲಾದ ಮಾರ್ಗಸೂಚಿಗಳು. | ಸುತ್ತೋಲೆ ಸಂಖ್ಯೆ : ಸಚುಆ/16/2013-14 ದಿನಾಂಕ: 05-08-2013 ರಂತೆ ಕ್ರಮವಿಡತಕ್ಕದ್ದು. |
| 03 | ಸಹಕಾರ ಸಂಘಗಳ / ಸಹಕಾರಿಗಳ ಆಡಳಿತ ಮಂಡಲಿ ಚುನಾವಣೆಗೆ ಚಿಹ್ನೆಗಳ ಹಂಚಿಕೆ ಕುರಿತು. | ಸಂಖ್ಯೆ : ಸಚುಆ/18/ಚಿಹ್ನೆ/2013-14 ದಿನಾಂಕ : 06-08-2013 ರಲ್ಲಿ ಉಪನಿಬಂಧಕರುಗಳಿಗೆ ನೀಡಿರುವ ಸೂಚನೆಯಂತೆ ಕ್ರಮವಿಡತಕ್ಕದ್ದು. |
| 04 | ಸಹಕಾರ ಸಂಘಗಳ ಪದಾಧಿಕಾರಿಗಳ ಚುನಾವಣೆ ನಡೆಸುವ ಕುರಿತು. | ಸುತ್ತೋಲೆ ಸಂಖ್ಯೆ : ಸಚುಆ/ಪ.ಚು/27/2013-14 ದಿನಾಂಕ : 27-09-2013 ರಂತೆ. |
| 05 | ಸಹಕಾರ ಸಂಘಗಳ / ಸಹಕಾರಿಗಳ ಆಡಳಿತ ಮಂಡಲಿ/ಪದಾಧಿಕಾರಿಗಳ ಚುನಾವಣೆಗೆ – ಸಂಘಗಳ /ಸಹಕಾರಿಗಳ ಆಡಳಿತ ಮಂಡಳಿಗಳ ಮುಖ್ಯಕಾರ್ಯನಿರ್ವಾಹಕರುಗಳು ಕಾನೂನಿಗನು ಗುಣವಾಗಿ ಕೈಗೊಳ್ಳಬಹುದಾದ ಅಗತ್ಯ ಕ್ರಮವಿಡುವ ಅಂಶಗಳನ್ನು ಆಡಳಿತ ಮಂಡಲಿ ಅವಗಾಹನೆಗೆ ಮಂಡಿಸುವ ಕುರಿತು. | ಸುತ್ತೋಲೆ ಸಂಖ್ಯೆ : ಸಚುಆ/ಚುನಾವಣೆ/34/2013-14 ದಿನಾಂಕ : 11-11-2013 ರಂತೆ ಕ್ರಮವಿಡತಕ್ಕದ್ದು. |
| 06 | ಸಹಕಾರ ಚುನಾವಣಾ ಆಯೋಗವು ನಡೆಸುವ ಸಹಕಾರ ಸಂಘ ಸಂಸ್ಥೆಗಳ ಚುನಾವಣೆಗೆ ಪೊಲೀಸ್ ಸಿಬ್ಬಂದಿಯನ್ನು ಒದಗಿಸುವಿಕೆ –ಬಂದೋಬಸ್ತ್ ಕರ್ತವ್ಯದ ಸಂಬಂಧ ಶುಲ್ಕ ಪಾವತಿ ದರವನ್ನು ನಿಗಧಿಪಡಿಸುವ ಕುರಿತು. | ಸುತ್ತೋಲೆ ಸಂಖ್ಯೆ : ಸಚುಆ/ಚುನಾವಣೆ/8/2014 ದಿನಾಂಕ : 18-03-2014 ರಂತೆ ಕ್ರಮವಿಡತಕ್ಕದ್ದು. |

**ಚುನಾವಣೆ ನಂತರದಲ್ಲಿ ಕೈಗೊಳ್ಳಬೇಕಾದ ಕ್ರಮಗಳು.**

| ಕ್ರಮ ಸಂಖ್ಯೆ | ವಿಷಯ | ಸುತ್ತೋಲೆ / ಪತ್ರಗಳ ಕ್ರಮಸಂಖ್ಯೆ ಮತ್ತು ದಿನಾಂಕ |
|---|---|---|
| 01 | ಚುನಾವಣೆಗೆ ಸಂಬಂಧಪಟ್ಟ ಕಾಗದ ಪತ್ರಗಳ ವಿಲೇವಾರಿ ಕುರಿತು. | ಸುತ್ತೋಲೆ ಸಂಖ್ಯೆ : ಸಚುಆ/16/2013-14 ದಿನಾಂಕ 12-08-2013 ರಂತೆ ಕ್ರಮವಿಡತಕ್ಕದ್ದು. |

ಜಿಲ್ಲಾ ಚುನಾವಣಾಧಿಕಾರಿ, ಉಪವಿಭಾಗೀಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಹಾಗೂ ಇಲಾಖಾ ಕ್ಷೇತ್ರಾಧಿಕಾರಿಗಳು ಪ್ರಾಥಮಿಕ ಸಂಘಗಳು / ಸಹಕಾರಿಗಳ ಮತದಾರರ ಪಟ್ಟಿಗೆ ಸಿದ್ದಪಡಿಸುವಿಕೆಗೆ ಸಂಬಂಧಿಸಿದಂತೆ ಸಂಘಗಳ / ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕನು ಸಿದ್ದಪಡಿಸಿ ಸಲ್ಲಿಸಿದ (ಕ್ರ.ಸಂ.4ರಲ್ಲಿ ತಿಳಿಸಿರುವಂತೆ) ಕರಡು ಪಟ್ಟಿಗಳನ್ನು ಪರಿಶೀಲಿಸುವ ಸಂಬಂಧ ಪರಿಶೀಲನಾ ತಂಡಗಳನ್ನು ರಚಿಸಿ, ಸದಸ್ಯರ ಆಕ್ಷೇಪಣೆಗಳ ಬಗ್ಗೆ ಪರಿಶೀಲಿಸಿ ಅಂತಿಮ ಪಟ್ಟಿಗಳನ್ನು (ಕ್ರ.ಸಂ. 5ರಲ್ಲಿ ತಿಳಿಸಿರುವಂತೆ) ಸಿದ್ದಪಡಿಸಿ ದೃಢೀಕರಿಸಿ ಪ್ರಕಟಿಸುವ ಬಗ್ಗೆ ಅಗತ್ಯ ಕ್ರಮ ತೆಗೆದುಕೊಳ್ಳಲು ನಿರ್ದೇಶಿಸಿದೆ.

........8/-

ಮೇಲೆ ವಿವರಿಸಿದಂತೆ, ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಮತ್ತು ನಿಯಮಗಳು 1960 ಹಾಗೂ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997, ಕರ್ನಾಟಕ ಸೌಹಾರ್ದ ಸಹಕಾರಿ (ತಿದ್ದುಪಡಿ) ನಿಯಮಗಳು 2013ರ ಅವಕಾಶಗಳು ಹಾಗೂ ಸಂಘಗಳ / ಸಹಕಾರಿಗಳ ಬೈಲಾ ಅವಕಾಶಗಳನ್ನು ಗಮನದಲ್ಲಿಟ್ಟುಕೊಂಡು ಹಂತಹಂತವಾಗಿ ಕೈಗೊಳ್ಳಬೇಕಾದ ವಿವಿಧ ಪ್ರಕ್ರಿಯೆಗಳ ಬಗ್ಗೆ ಗಮನಹರಿಸಿ ಅಗತ್ಯ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಚುನಾವಣಾಧಿಕಾರಿಗಳಿಗೆ ನಿರ್ದೇಶಿಸಲಾಗಿದೆ.

ಪ್ರತಿ ಅಂಶಗಳ ಬಗ್ಗೆ ಆಗಾಗ್ಗೆ ಸಂಕ್ಷಿಪ್ತವಾಗಿ ವರದಿಯನ್ನು ರಾಜ್ಯ ಸಹಕಾರ ಚುನಾವಣಾ ಪ್ರಾಧಿಕಾರಕ್ಕೆ ಸಲ್ಲಿಸಲು ನಿರ್ದೇಶಿಸಿದೆ.

(ಎನ್.ಸಿ. ಮುನಿಯಪ್ಪ)
**ಆಯುಕ್ತರು**
**ಸಹಕಾರ ಚುನಾವಣಾ ಪ್ರಾಧಿಕಾರ, ಬೆಂಗಳೂರು.**